<u>ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಮೇರೆಗೆ ಪ್ರಮಾಣೀಕರಿಸಲಾಯಿತು . ದಿ: **17.12.2025.**</u>

<u>ಪಾಟೀ ಸವಾಲುಃ **1** ರಿಂದ **3, 6** ಹಾಗು **7** ನೇ ಆರೋಪಿತರ ಪರ ಶ್ರೀ ಬಿ.ವಿ.ಬಿ ವಕೀಲರಿಂದ :</u>

**1)** ನನ ತವರು ಮನೆ ಸಿರಿಗೇರಿ ಗ್ರಾಮ ಬಳ್ಳಾರಿಯಿಂದ ಸುಮಾರು **40-45** ಕಿ.ಮೀ ದೂರದಲ್ಲಿದೆ ಎಂದರೆ ಸರಿ. ನನ್ನ ಮದುವೆ **1** ನೇ ಆರೋಪಿತನೊಂದಿಗೆ **2020** ರಲ್ಲಿ ಆಗಿದ್ದು ಅದು ಹೊಸ ಸಂಬಂಧ ಇರುತ್ತದೆ. ನನ್ನ ಮದುವೆ ಆದಾಗ ನನ್ನ ಗಂಡ ಜೆ.ಎಸ್.ಡಬ್ಲೂ ಕಾರಖಾನೆಯಲ್ಲಿ ಟ್ರ್ಯಾಕ್ಟರ್ ಚಾಲಕ ಎಂದು ಕೆಲಸಕ್ಕೆ ಹೋಗುತ್ತಿದ್ದ. ನನ್ನ ಮದುವೆಯಾದಾಗ **1** ನೇ ಆರೋಪಿತನ ತಂದೆ ಮರಣ ಹೊಂದಿದ್ದರು ಎಂದರೆ ಸರಿ. ನನ್ನ ಮಾವ ಬಳ್ಳಾರಿಯಲ್ಲಿ ಕೆ.ಯು.ಡಬ್ಲ್ಯೂ ಎಸ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ.

**2)** ನನ್ನ ಮಾವ ಮರಣ ಹೊಂದಿದ್ದಕ್ಕಾಗಿ ನನ್ನ ಗಂಡನಿಗೆ ಅನುಕಂಪದ ಆಧಾರದ ಮೇಲೆ **2021** ರಲ್ಲಿ ನೌಕರಿ ಸಿಕ್ಕಿರುತ್ತದೆ ಎಂದರೆ ಸರಿ. ನನ್ನ ಮದುವೆಯಾದಾಗ **1** ನೇ ಆರೋಪಿತನ ಸಹೋದರಿ ರೋಜಾ ಇವಳು ಇವಳ ಮದುವೆಯಾಗಿ, ಅವಳು ಹೊಸಪೇಟೆಯಲ್ಲಿ ಇರುತ್ತಿದ್ದಳು ಎಂದರೆ ಸರಿ. ನನ್ನ ತಂದೆ ತಾಯಿ ಹಾಗು ಬಂಧುಗಳು **1** ನೇ ಆರೋಪಿ ಬಹಳ ಒಳ್ಳೆಯ ವ್ಯಕ್ತಿ ಸಂಭಾವಿತ ಹಾಗು ಬಾಯಿ ಸತ್ತವನು ಎಂದು ಹೇಳಿ ಮದುವೆ ಮಾಡಿಕೊಟ್ಟಿದ್ದರು ಎಂದರೆ ಸರಿ. ಮದುವೆ ಆದ ನಂತರ ನಾವು ಗಂಡ ಹೆಂಡತಿ ಚೆನ್ನಾಗಿದ್ದೆವು ಎಂದರೆ ಸ್ವಲ್ಪ ದಿವಸ ಚೆನ್ನಾಗಿದ್ದೆವು ಎಂದು ಸಾಕ್ಷಿ ಉತ್ತರಿಸುತ್ತಾರೆ. ನಾನು ಮದುವೆಯಾಗಿ ಬಂದಾಗ ನನ್ನ ಮಾನವನವರು ಕಟ್ಟಿಸಿದ ಹೊಸ ಮನೆಯಲ್ಲಿ ಇದ್ದೆವು ಎಂದರೆ ಸರಿ.

**3)** ಆ ಮನೆಯಲ್ಲಿ ಗ್ಯಾಸ್, ಟೀವಿ ಹಾಗು ಮುಂತಾದ ಮೂಲಭೂತ ಸೌಕರ್ಯಗಳು ಇದ್ದವು ಎಂದರೆ ಸರಿ. ಆ ಹೊಸ ಮನೆಗೆ ಕಂಪೌಂಡ್ ಮತ್ತು ಗೇಟ್ ಇದೆ ಎಂದರೆ ಸರಿ. ಹೊರಗಡೆ ಓಡಾಡುವ ಜನರಿಗೆ ಮನೆಯಲ್ಲಿ ಏನು ನಡೆಯುತ್ತದೆ ಎಂದು ಗೊತ್ತಾಗುವುದಿಲ್ಲ ಎಂದರೆ ಸರಿಯಲ್ಲ. ಮನೆಯಲ್ಲಿ ನಾನು, ಆ ಮನೆಯಲ್ಲಿ ನಾನು, ನನ್ನ ಗಂಡ ಮತ್ತು ನನ್ನ

ಅತ್ತೆ ಹನುಮಂತಮ್ಮ ಮಾತ್ರ ಇರುತ್ತಿದ್ದೆವು ಎಂದರೆ ಉಳಿದವರು ಬಂದು ಹೋಗುವುದನ್ನು ಮಾಡುತ್ತಿದ್ದರು ಎಂದುಸ ಸಾಕ್ಷಿ ಉತ್ತರಿಸುತ್ತಾರೆ. ನನ್ನ ಅತ್ತೆ ತವರು ಮನೆ ಆಂಧ್ರಪ್ರದೇಶದ ಹಂಚಿನಾಳ ಎಂದರೆ ಸರಿ. **3, 6** ಹಾಗು **7** ನೇ ಆರೋಪಿತರು ನಮ್ಮ ಮನೆಯಲ್ಲಿ ವಾಸವಾಗಿರುತ್ತಿರಲಿಲ್ಲ ಎಂದರೆ ಸರಿ. ಆದರೆ ಅವರು ನಮ್ಮ ಮನೆಗೆ ಬಂದು ಹೋಗುತ್ತಿದ್ದರು.

**4)** ಸಂಬಂಧಿಕರು ಎಂದರೆ ಮನೆಗೆ ಹೋಗಿ ಬರುವುದನ್ನು ಮಾಡುತ್ತಾರೆ ಎಂದರೆ ಸರಿ. ನನ್ನ ಹಿರಿಯ ಮಗಳು ಶ್ರೀನಿಧಿ ಡಿಸೆಂಬರ್ **2021** ರಲ್ಲಿ ಜನಿಸಿದಳು ಎಂದರೆ ಸರಿ. ಹಿರಿಯ ಮಗಳು ಜನಿಸಿದ ನಂತರ ನನ್ನ ಅತ್ತೆ ಹನುಮಂತಮ್ಮ **5-6** ತಿಂಗಳು ನನ್ನ ಜೊತೆ ಒಟ್ಟಿಗೆ ಇದ್ದಳು ಎಂದರೆ ಸರಿ. ಅದಾದ ನಂತರ ನನ್ನ ಅತ್ತೆ ಹಂಚಿನಾಳ ನಲ್ಲಿ ವಾಸಿಸಲು ಪ್ರಾರಂಭಿಸಿದಳು ಎದರೆ ಸಾಕ್ಷಿ ನಮ್ಮ ಹತ್ತಿರ ಸ್ವಲ್ಪ ದಿವಸ ಬಂದು ಇರುತ್ತಿದ್ದರು ಮತ್ತು ಹಂಚಿನಾಳನಲ್ಲಿಯೂ ಕೂಡ ಇರುತ್ತಿದ್ದರು ಎಂದು ಉತ್ತರಿಸುತ್ತಾರೆ. ನನ್ನ ಹಿರಿಯ ಮಗಳು ಜನಿಸಿದ ನಂತರ ನಮ್ಮ ಮನೆಗೆ ನನ್ನ ತಂದೆ, ತಾಯಿ ಹಾಗು ನನ್ನ ಸೋದರ ಮಾವ ಬಂದು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ ಅವರು ನಮ್ಮ ಮನೆಗೆ ಬರಲು ನಮ್ಮ ಮನೆಯವರು ಬಿಡುತ್ತಿರಲಿಲ್ಲ.

**5)** ನನ್ನ ತಂದೆ ತಾಯಿ ನಮ್ಮ ಮನೆಗೆ ಬರಲು ನನ್ನ ಗಂಡ ತಕರಾರು ಮಾಡುತ್ತಿರಲಿಲ್ಲ ಎಂದರೆ ಸರಿ. ಆದರೆ ನನ್ನ ಅತ್ತೆ ಬೈಯುತ್ತಿದ್ದರು. ನನ್ನ ಅತ್ತೆ ನನ್ನ ಗಂಡನಿಗೆ ಈ ಬಗ್ಗೆ ಬೈಯುತ್ತಿದ್ದರು ಎಂದು ಸುಳ್ಳು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅತ್ತೆ ನಮ್ಮ ತಂದೆ ತಾಯಿ ನಮ್ಮ ಮನೆಗೆ ಬಂದು ಹೋಗಲು ಯಾವಾಗಲು ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಅತ್ತೆ ಅಲ್ಲಿಪುರದಲ್ಲಿ ಇರುತ್ತಿರಲಿಲ್ಲ, ಹಂಚಿನಾಳದಲ್ಲಿ ಇರುತ್ತಿದ್ದಳು ಆದ್ದರಿಂದ ಅವಳು ತಕರಾರು ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ.

**6)** ನನ್ನ ಹಿರಿಯ ಮಗಳು ಶ್ರೀನಿಧಿ ಜನಿಸಿದ ಒಂದು ವರ್ಷದ ಒಳಗೆ ನಾನು ಪುನಃ ಗರ್ಭಿಣಿ ಆದೆ ಎಂದರೆ ಸರಿ. ನನ್ನ ತಂದೆ ತಾಯಿಗಳು ಬಾಣಂತನದ ಸಲುವಾಗಿ ನನ್ನನ್ನು

ಸಿರಿಗೇರಿಗೆ ಕರೆದುಕೊಂಡು ಹೋದರು ಎಂದರೆ ಸಾಕ್ಷಿ ನಾನು ಬರದಾನಹಳ್ಳಿಯಲ್ಲಿ 6 ಮತ್ತು 7 ನೇ ಆರೋಪಿತರ ಮನೆಯಲ್ಲಿ ಇದ್ದೆ ಎಂದು ಉತ್ತರಿಸುತ್ತಾರೆ. ಹೆರಿಗೆಯಾಗುವ ಮೂರು ತಿಂಗಳ ಪೂರ್ವದವರೆಗೂ ಅವರ ಮನೆಯಲ್ಲಿ ಇದ್ದೆ. ಬಳ್ಳಾರಿಯ ವಿಮ್ಸ್ ಆಸ್ಪತ್ರೆಯಲ್ಲಿ ಎರಡನೇ ಮಗುವಿನ ಹೆರಿಗೆ ಆಗಿರುತ್ತದೆ. 2 ನೇ ಮಗಳು ಭೂಮಿಕ 2022 ರಲ್ಲಿ ಜನಿಸಿದಳು ಎಂದರೆ ಸರಿ.

7) ವಿಮ್ಸ್ ಆಸ್ಪತ್ರೆಯಲ್ಲಿ ಹೆರಿಗೆ ಆದಾಗ ನನ್ನ ತಂದೆ ತಾಯಿ ಬಳ್ಳಾರಿಯ ವಿಮ್ಸ್ ಆಸ್ಪತ್ರೆಯಲ್ಲಿಯೇ ಇರುತ್ತಿದ್ದರು. ಹೆರಿಗೆ ಆದ ನಂತರ ನನ್ನನ್ನು ನನ್ನ ತಂದೆ ತಾಯಿ ಸಿರಿಗೇರಿಗೆ ಕರೆದುಕೊಂಡು ಹೋದರು ಎಂದರೆ ಸರಿ. ನಾನು ಸಿರಿಗೇರಿಯಲ್ಲಿ ಇದ್ದಾಗ ನನ್ನ ಗಂಡನೂ ಕೂಡ ಸಿರಿಗೇರಿಯಲ್ಲಿ ಬಂದು ಇದ್ದನು ಎಂದರೆ ಸರಿ. 5-6 ತಿಂಗಳುಗಳ ಕಾಲ 1 ನೇ ಆರೋಪಿ ಸಿರಿಗೇರಿಯಿಂದ ಪ್ರತಿ ದಿವಸ ಮೊಟಾರ್ ಸೈಕಲ್ ನಲ್ಲಿ ತನ್ನ ಕೆಲಸಕ್ಕೆ ಬಳ್ಳಾರಿಗೆ ಬಂದು ಹೋಗಿ ಮಾಡುತ್ತಿದ್ದ ಎಂದರೆ ಸರಿ. ಆ ಸಮಯದಲ್ಲಿ ಕೋವಿಡ್ ಇದ್ದುದರಿಂದ ಜನವರಿ 2023 ರಲ್ಲಿ ನನ್ನ ಮಗಳು ಭೂಮಿಕಾ ಇವಳು ಮರಣ ಹೊಂದಿದಳು ಎಂದರೆ ಸರಿ. ಅವಳು ಸಿರಿಗೇರಿಯಲ್ಲಿ ಮರಣ ಹೊಂದಿರುತ್ತಾಳೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ ಅವಳ ಸ್ಥಿತಿ ಗಂಭೀರವಾಗಿದ್ದರಿಂದ ಅವಳನ್ನು ಅಲ್ಲಿಪುರದಿಂದ ಸಿರಿಗೇರಿಗೆ ಕರೆದುಕೊಂಡು ಹೋಗಲಾಯಿತು.

8) ಕರೋನಾದಲ್ಲಿ ಒಬ್ಬರ ಮನೆಗೆ ಒಬ್ಬರು ಹೋಗಿ ಬರುವುದನ್ನು ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಸರ್ಕಾರದವರು ಒಂದು ಊರಿನಿಂದ ಇನ್ನೊಂದು ಊರಿಗೆ ವಾಹನ ಸಂಚಾರವನ್ನು ನಿಷೇದ ಮಾಡಿದ್ದರು ಎಂದರೆ ಸರಿಯಲ್ಲ. ಸಿರಿಗೇರಿಯಲ್ಲಿ ನನ್ನ ಮಗಳ ದಫನ್ ಆದ ನಂತರ ಕರೋನಾದ ಸಲುವಾಗಿ ನಾನು 6 ತಿಂಗಳ ಅಲ್ಲಿಯೇ ಇದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ ನನ್ನ ಗಂಡನಿಗೆ ಹೃದಯಾಘಾತ ಆಗಿದ್ದರಿಂದ ನಾನು ಅಲ್ಲಿಪುರಕ್ಕೆ ಬಂದಿದ್ದೆ. ನನ್ನ ಗಂಡನಿಗೆ ಹೃದಯಾಘಾತ ಆಗಿದ್ದರಿಂದ ಅವರ ಖಾಸಗಿ ಆಸ್ಪತ್ರೆಯಲ್ಲಿ 15 ದಿವಸಗಳ ವರೆಗೆ ಇದ್ದರು.

**9)** ನನ್ನ ಗಂಡನ ಆರೋಗ್ಯ ಸರಿಯಾಗಿ ಇಲ್ಲದೇ ಇರುವ ಕಾರಣ ಅವನನ್ನು ನನ್ನ ತವರು ಮನೆಗೆ ಕರೆದುಕೊಂಡು ಹೋಗಿ ಇಟ್ಟುಕೊಂಡಿದ್ದೆ ಎಂದರೆ ಸರಿಯಲ್ಲ. ನನ್ನ ಗಂಡನ ಆರೋಗ್ಯ ಸರಿಯಾಗಿಲ್ಲದೇ ಇರುವ ಕಾರಣ ನಾನು ಹಾಗು ನನ್ನ ತಾಯಿ ಅವನ ಮೇಲೆ ದೌರ್ಜನ್ಯ ಮಾರ್ಚ 2023 ರಿಂದ ಅವನ ವೇತನವನ್ನು ನಾವೇ ಪಡೆಯುತ್ತಿದ್ದೆವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ ಅವನು ಕುಡಿಯಲು ಉಪಯೋಗಿಸುತ್ತಿದ್ದ.

**10)** ನನ್ನ ಗಂಡ ಕುಡಿಯುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವನಿಗೆ ಕುಡಿಯುವ ಚಟ ಇತ್ತು ಎಂದು ನಾನು ನನ್ನ ತಂದೆ ತಾಯಿ ಎಲ್ಲರೂ ಕೂಡಿ ಸೃಷ್ಟಿಸಿ ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು ನನ್ನ ದೂರಿನಲ್ಲಿ ನನ್ನ ಗಂಡನ ವೇತನವನ್ನು ಜಂಟಿ ಖಾತೆಯಲ್ಲಿ ಇಡುತ್ತಿದ್ದು ಅದನ್ನು ನಾನೇ ತೆಗೆದುಕೊಂಡು ನನ್ನ ಗಂಡನಿಗೆ ಬೇಕಾದ ಖರ್ಚಿಗೆ ಕೊಡುತ್ತಿದ್ದೆನು ಎಂದು ಬರೆಸಿಲ್ಲ. ದೂರಿನ ಸದರಿ ಭಾಗವನ್ನು ನಿಡಿ-1 ಎಂದು ಗುರುತಿಸಲಾಯಿತು.

**11)** ನನ್ನ ಗಂಡನಿಗೆ ಅಲ್ಲಿಪುರದಲ್ಲಿ ಇರುವ ಮನೆ ಬಿಟ್ಟರೆ ಬೇರೆ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ ಅಲ್ಲಿಪುರದಲ್ಲಿ ಬೇರೆ ಆಸ್ತಿ ಇರುವುದಿಲ್ಲ ಹಂಚಿನಾಳದಲ್ಲಿ 3 ಎಕರೆ ಜಮೀನು ಇದೆ, ಬರದಾನಹಳ್ಳಿಯಲ್ಲಿ 1 ಎಕರೆ ಜಮೀನು ಇದೆ. ನಾನು ಹಾಗು ನನ್ನ ತಾಯಿ ನನ್ನ ಗಂಡನಿಗೆ ದೌರ್ಜನ್ಯ ಮಾಡಿ ಬೆದರಿಸಿ ಅವನ ಹೆಸರಿನಲ್ಲಿರುವ ಆಸ್ತಿಯನ್ನು ನನ್ನ ಹೆಸರಿನಲ್ಲಿ ಮಾಡಿಕೊಳ್ಳಬೇಕು ಎಂದು ಪ್ರಯತ್ನಿಸುತ್ತಿದ್ದೆವು ಎಂದರೆ ಸರಿಯಲ್ಲ. ಅದಕ್ಕೆ ನನ್ನ ಗಂಡ ಹೊಲ ಮತ್ತು ಮನೆಗಳು ನನ್ನ ಹೆಸರಿನಲ್ಲಿ ಇಲ್ಲ ನನ್ನ ತಾಯಿಯ ಹೆಸರಿನಲ್ಲಿ ಇವೆ ಆದ್ದರಿಂದ ಅವುಗಳನ್ನು ಮಾಡಿಕೊಡಲು ಬರುವುದಿಲ್ಲ ಎಂದು ಹೇಳುತ್ತಿದ್ದ ಆದರೂ ಕೂಡ ನಾವು ಅವನ ಮೇಲೆ ದೌರ್ಜನ್ಯ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ನಾನು ಹಾಗು ನನ್ನ ತಾಯಿ 1 ನೇ ಆರೋಪಿಗೆ ಅಲ್ಲಿಪುರದಲ್ಲಿ ಏಕೆ ಇರುತ್ತೀ, ಸಿರಿಗೇರಿಗೆ ಬಂದು ವಾಸಿಸುವಂತೆ ಒತ್ತಾಯಿಸುತ್ತಿದ್ದೆವು ಎಂದರೆ ಸರಿಯಲ್ಲ.

12) ನಾನು ಮತ್ತು ನನ್ನ ತಾಯಿ ಅಲ್ಲಿಪುರದಲ್ಲಿರುವ ಮನೆಯನ್ನು ಬಾಡಿಗೆಗೆ ಕೊಡೋಣ, ಬಾಡಿಗೆಯ ಹಣವನ್ನು ನಾವು ಪಡೆಯಬೇಕು ಎಂಬ ಉದ್ದೇಶದಿಂದ ನನ್ನ ಗಂಡನಿಗೆ ಹೇಳುತ್ತಿದ್ದೆವು ಎಂದರೆ ಸರಿಯಲ್ಲ. ನನ್ನ ಗಂಡ, ಅತ್ತೆ ಹಾಗು ಅವರ ಸಂಬಂಧಿಕರು ನನಗೆ ಹೊಡೆ ಬಡೆ ಮಾಡುತ್ತಿದ್ದ ಬಗ್ಗೆ ಹಾಗು ಬೈಯುತ್ತಿದ ಬಗ್ಗೆ ಮೊದಲು ದೂರನ್ನು ನೀಡಿರಲಿಲ್ಲ ಆದರೆ ಪಂಚಾಯತಿ ಮಾಡಿರುತ್ತೇವೆ. ಪಂಚಾಯತಿಯನ್ನು ಮಾಡಿದ ಬಗ್ಗೆ ನನ್ನ ದೂರಿನಲ್ಲಿ ಹಾಗು ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ನಾನು ಹೇಳಿದ್ದೆ ಆದರೆ ಅವರು ಬರೆದುಕೊಂಡಿಲ್ಲ ಎಂದು ಸಾಕ್ಷಿ ಉತ್ತರಿಸುತ್ತಾರೆ.

13) ಪಂಚಾಯತಿಯನ್ನು ಮಾಡಿದ ಬಗ್ಗೆ ನನ್ನ ದೂರಿನಲ್ಲಿ ಹಾಗು ಹೇಳಿಕೆಯಲ್ಲಿ ಹೇಳಿಲ್ಲ ಆದ್ದರಿಂದ ಅವುಗಳಲ್ಲಿ ಆ ಬಗ್ಗೆ ಉಲ್ಲೇಖವಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಕುಡಿದು ಕೆಲಸಕ್ಕೆ ಹೋಗುತ್ತಿರಲಿಲ್ಲ ಎನ್ನುವ ಬಗ್ಗೆ ನನ್ನ ದೂರಿನಲ್ಲಿ ಬರೆಸಿಲ್ಲ ಎಂದರೆ ನನಗೆ ಮಾತನಾಡಲು ಬರುತ್ತಿರಲಿಲ್ಲ ಆದ್ದರಿಂದ ಬರೆಸಿಲ್ಲ ಎಂದು ಸಾಕ್ಷಿ ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ ನನ್ನ ಗಂಡ ಕುಡಿದು ಕೆಲಸಕ್ಕೆ ಹೋಗುತ್ತಿದ್ದ ಅಲ್ಲಿ ಮಲಗುತ್ತಿದ್ದ ಆ ಬಗ್ಗೆ ಕಛೇರಿಯವರು ನನಗೆ ಫೋನ್ ಮಾಡಿ ತಿಳಿಸುತ್ತಿದ್ದರು.

14) ನನ್ನ ಗಂಡ ಕೆಲಸಕ್ಕೆ ಹೋಗುವ ಸಮಯದಲ್ಲಿ ಈ ರೀತಿಯ ಹುಡುಗಿ ಇರಬಾರದು ಸಾಯಬೇಕು ಎಂದು ಹೇಳಿ ಬೈಯುತ್ತಿದ್ದರು ಎನ್ನುವ ವಿಷಯವನ್ನು ನನ್ನ ದೂರಿನಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ಸುಮಾರು 2 ವರ್ಷದ ಹಿಂದೆ ಮುಂಜಾನೆ 9 ಗಂಟೆಗೆ ಉಪಹಾರ ಮುಗಿಸಿದ ನಂತರ 1 ನೇ ಆರೋಪಿ ಹೊರಗಡೆ ಹೋಗಿ ಸರಾಯಿ ಕುಡಿದು ಬಂದ ಎಂದು ನನ್ನ ದೂರಿನಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ಈ ಎರಡು ವಿಷಯಗಳನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**15)** ನಾನು ಆಸ್ಪತ್ರೆಗೆ ದಾಖಲಾಗುವುದಕ್ಕಿಂತ **5-6** ದಿವಸ ಪೂರ್ವದಲ್ಲಿ ನನ್ನ ತಂದೆ ಕಿಡ್ನಿಯ ಸಮಸ್ಯೆಯಿಂದಾಗಿ ವಿಮ್ಸ್ ಆಸ್ಪತ್ರೆಗೆ ದಾಖಲಾಗಿದ್ದರು ಎಂದರೆ ಸರಿ. ಪ್ರತಿ ದಿವಸ ನನ್ನ ಗಂಡ ಅಲ್ಲಿಪುರದಿಂದ ನನ್ನ ಜೊತೆ ಕ್ಯಾರಿಯರ್ ತೆಗೆದುಕೊಂಡು ನನ್ನನ್ನು ಆಸ್ಪತ್ರೆಗೆ ಮುಂಜಾನಗೆ ಬಿಡುತ್ತಿದ್ದರು ಮತ್ತು ಸಂಜೆ ಹೋಗುವಾಗ ಕರೆದುಕೊಂಡು ಹೋಗುತ್ತಿದ್ದರು ಎಂದರೆ ಸಾಕ್ಷಿ ಕೆಲವ ಎರಡು ದಿವಸ ಮಾತ್ರ ಹಾಗೇ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ ನನ್ನ ಗಂಡ ಕೇವಲ **2** ದಿವಸ ಹೀಗೇ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಪ್ರತಿದಿವಸ ನನ್ನನ್ನು ಕರೆದುಕೊಂಡು ಬರುತ್ತಿದ್ದ ಮತ್ತು ಕರದುಕೊಂಡು ಹೋಗುತ್ತಿದ್ದ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಗೆ ದಾಖಲಾಗುವ ಹಿಂದಿನ ದಿವಸ ಸಾಯಂಕಾಲ ಆಸ್ಪತ್ರೆಯಲ್ಲಿ ಇದ್ದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ ನನ್ನ ಗಂಡ ಜಗಳ ಮಾಡಿ ಕರೆದುಕೊಂಡು ಹೋಗಿದ್ದ.

**16)** ನನ್ನ ತಂದೆ ವಿಮ್ಸ್ ಆಸ್ಪತ್ರೆಯಲ್ಲಿ ಇದ್ದಾಗ ಹಂಚಿನಾಳ ರಮೇಶ ಇವರು ನನ್ನ ತಂದೆಯನ್ನು ನೋಡಲು ಆಸ್ಪತ್ರೆಗೆ ಬಂದಿದ್ದರು ಎಂದರೆ ಸರಿ. ರಾತ್ರಿಯಾದ ನಂತರ ನಾನು, ನನ್ನ ಗಂಡ ಹಾಗು ರಮೇಶ ಇವರನ್ನು ನನ್ನ ತಂದೆ ಕಳುಹಿಸಿಕೊಟ್ಟಿದ್ದರಿಂದ ನಾವೆಲ್ಲರೂ ಅಲ್ಲಿಪುರದಲ್ಲಿ ಇದ್ದೆವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ ಅವರಿಬ್ಬರೇ ಹೋಗಿದ್ದರು ನನ್ನನ್ನು ಕರೆದುಕೂಂಡು ಹೋಗಲಿಲ್ಲ. ನಂತರ ಆದಿತ್ಯವಾರ ನನ್ನನ್ನು ಕರೆದುಕೊಂಡು ಹೋದರು.

**17)** ನಮ್ಮ ಮನೆಯಲ್ಲಿ ನಾನೇ ಅಡುಗೆಯನ್ನು ಗ್ಯಾಸ್ ಮೇಲೆ ಮಾಡುತ್ತಿದ್ದೆ ಎಂದರೆ ಸರಿ. ದಿನಾಂಕ **07.08.2023** ರಂದು ಮುಂಜಾನೆ **08.00** ಗಂಟೆ ಸುಮಾರಿಗೆ ನಾನು ಗ್ಯಾಸ್ ಅನ್ನು ಸರಿಯಾಗಿ ಆಫ್ ಮಾಡಲಾರದೇ ನನ್ನ ಗಂಡನನ್ನು ಕಳುಹಿಸಲು ಬಂದಿದ್ದೆ ಎಂದರೆ ಸರಿಯಲ್ಲ. ನಾನು ಪುನಃ ಅಡುಗೆ ಮನೆಗೆ ಹೋಗಿ ಗ್ಯಾಸ್ ಹಚ್ಚಲು ಹೋದಾಗ ಆಕಸ್ಮಿಕವಾಗಿ ನನಗೆ ಗ್ಯಾಸ್ ಲೀಕೇಜ್ ಆಗಿ ಬೆಂಕಿ ತಗುಲಿರುತ್ತದೆ ಎಂದರೆ ಸರಿಯಲ್ಲ. ನಾನು ಚೀರಾಡುವ ಶಬ್ದ ಕೇಳಿ ನನ್ನ ಗಂಡ ಒಳಗೆ ಬಂದ ಎಂದರೆ ಸರಿಯಲ್ಲ. ನನ್ನ ಗಂಡ ಒಳಗೆ ಬಂದು ನೀರು ಉಗ್ಗಿ ಬೆಂಕಿ

ಆರಿಸಿದ, ಆತನಿಗೂ ಕೂಡ ಸುಟ್ಟ ಗಾಯಗಳು ಆಗಿರುತ್ತವೆ ಎಂದರೆ ಸರಿಯಲ್ಲ. ನನ್ನ ಗಂಡ ವಿಮ್ಸ್ ಆಸ್ಪತ್ರೆಯಲ್ಲಿ ಸುಟ್ಟ ಗಾಯಗಳಿಗೆ ಚಿಕಿತ್ಸೆ ಪಡೆಯುತ್ತಿದ್ದ ಎಂದರೆ ಸರಿ. ನಾನು ಆಸ್ಪತ್ರೆಗೆ ದಾಖಲಾದಾಗ ನನ್ನ ತಂದೆ ತಾಯಿ, ನನ್ನ ಬಂಧುಗಳು, ವೀರೇಶ ಹಾಗು ಶಿವಕುಮಾರ ಇವರು ಆಸ್ಪತ್ರೆಯಲ್ಲಿ ಇದ್ದರು ಎಂದರೆ ಸರಿ. ಆದರೆ ಅವರು ಬೇರೆ ವಾರ್ಡ ನಲ್ಲಿ ಇದ್ದರು. ಆ ಸಮಯದಲ್ಲಿ ನನ್ನ ಅಕ್ಕನ ಗಂಡ ಪಂಪಾಪತಿ ಇವರು ಕೂಡ ಇದ್ದರು ಎಂದರೆ ಸರಿಯಲ್ಲ.

18) ನಾನು ಆಸ್ಪತ್ರೆಗೆ ದಾಖಲಾದ ದಿವಸ ಪೊಲೀಸರು ಆಸ್ಪತ್ರೆಗೆ ಬಂದು ವಿಚಾರಣೆ ಮಾಡಿರುತ್ತಾರೆ. ನಾನು ಆಗ ಪೊಲೀಸರ ಮುಂದೆ ಆಕಸ್ಮಿಕವಾಗಿ ನನಗೆ ಗ್ಯಾಸ್ ಲೀಕೇಜ್ ಆಗಿ ಬೆಂಕಿ ತಗುಲಿದೆ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ದೂರಿನಲ್ಲಿ ನಾನು ಆಸ್ಪತ್ರೆಯಲ್ಲಿ ಗ್ಯಾಸ್ ಲೀಕ್ ನಿಂದ ಬೆಂಕಿ ತಗುಲಿದೆ ಎಂದು ಹೇಳಿರುತ್ತೇನೆ ಎಂದು ಬರೆಸಿಲ್ಲ. ದೂರಿನ ಸದರಿ ಭಾಗವನ್ನು ನಿಡಿ-2 ಎಂದು ಗುರುತಿಸಲಾಯಿತು. ಆಸ್ಪತ್ರೆಯಲ್ಲಿ ನಾನು ದೂರನ್ನು ನೀಡಿದಾಗ ನನ್ನ ಗಂಡ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ ಈ ರೀತಿ ಸುಳ್ಳು ಹೇಳುವಂತೆ ನನ್ನ ಗಂಡ ಬೆದರಿಕೆ ಹಾಕಿದ್ದ. ನನ್ನ ಗಂಡ ಈ ರೀತಿ ಸುಳ್ಳು ಹೇಳುವಂತೆ ಬೆದರಿಕೆ ಹಾಕುವಂತೆ ನನ್ನ ದೂರನಲ್ಲಿ ಬರೆಸಿಲ್ಲ ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಅದರೂ ಸುಳ್ಳು ಸೃಷ್ಟಿಸಿಕೊಂಡು ಈಗ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

19) ನನ್ನ ಗಂಡ ವಿಮ್ಸ್ ಆಸ್ಪತ್ರೆಗೆ ಆಟೋರಿಕ್ಷಾದಲ್ಲಿ ಕರೆದುಕೊಂಡು ಬಂದು ಬಿಟ್ಟು ಹೋಗಿರುತ್ತಾನೆ ಎಂದು ಬರೆಸಿರುತ್ತೇನೆ. ಆಸ್ಪತ್ರೆಗೆ ಕರೆದುಕೊಂಡು ಬಂದಾಗ ನನ್ನ ತಾಯಿ, ಸೋದರ ಮಾವ ವಿರೇಶ, ಅಕ್ಕನ ಗಂಡ ವಿರೇಶ, ಪಂಪಾಪತಿ ಹಾಗು ಶಿವಕುಮಾರ ಇವರೆಲ್ಲರು ನನ್ನ ಗಂಡನಿಗೆ ಹೊಡೆದು ಅವನನ್ನು ಓಡಿಸಿದರು ಎಂದರೆ ಸರಿಯಲ್ಲ. ಆ ಕಾರಣದಿಂದ ನನ್ನ ಗಂಡ ಆ ದಿವಸ ಆಸ್ಪತ್ರೆಗೆ ಸೇರಿರಲಿಲ್ಲ ನಂತರ ಬಂದು ಸೇರಿಕೊಂಡ ಎಂದರೆ ಸರಿಯಲ್ಲ. ನನಗೆ ಸುಟ್ಟ ಗಾಯವಾದಾಗ ಆಸ್ಪತ್ರೆಗೆ ಬಂದು ದಾಖಲಾದ ನಂತರ ನೈಟಿಯನ್ನು ಬದಾಯಿಸಿದ್ದೇನೆ ಹೊರತು ಮನೆಯಲ್ಲಿ ಅದನ್ನು ಬಿಟ್ಟಿಲ್ಲ ಎಂದರೆ ಸರಿಯಲ್ಲ. ನೈಟಿಯನ್ನು

ಹಾಗು ಟರ್ಪಂಟೈಲ್ ಬಾಟಲಿಯನ್ನು ಪೊಲೀಸರಿಗೆ ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**20)** ಅವೆರಡು ವಸ್ತುಗಳ ಮೇಲೆ ನನ್ನ ಸಹಿ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ ನನಗೆ ಆರಾಮ ಇಲ್ಲದ ಕಾರಣ ನಾನು ಸಹಿ ಮಾಡಿಲ್ಲ. ನಮ್ಮ ಮನೆಯಲ್ಲಿ ಟರ್ಪಂಟೈಲ್ ಬಿದ್ದ ಹಾಗೆ ಹಾಗು ಸುಟ್ಟ ಹಾಗೆ ಯಾವುದೇ ಕಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಗ್ಯಾಸ್ ಲೀಕೇಜ್ ಆಗಿ ಸುಟ್ಟಿರುವುದು ಅಡುಗೆ ಮನೆಯಲ್ಲಿ ಆದರೂ ಕೂಡ ಹಾಲ್ ನಲ್ಲಿ ನನಗೆ ಸುಟ್ಟ ಗಾಯಗಳು ಆಗಿರುತ್ತವೆ ಎಂದು ಈ ಪ್ರಕರಣಕ್ಕಾಗಿ ಸುಳ್ಳು ಸೃಷ್ಟಿಸಿ ಪಂಚನಾಮೆ ಮಾಡಿದ್ದೇವೆ ಎಂದರೆ ಸರಿಯಲ್ಲ.

**21)** ನಾನು ದೂರನ್ನು ನೀಡಿಲ್ಲ, ನನ್ನ ಸಂಬಂಧಿಕರು ಬರೆಸಿದ ದೂರಿಗೆ ಸಹಿ ಮಾಡಿದ್ದೇನೆ, ಆ ಸಮಯದಲ್ಲಿ ನನಗೆ ಮಾತನಾಡಲು ಬರುತ್ತಿರಲ್ಲಿಲ್ಲ ಮತ್ತು ಪೂರ್ಣ ಪ್ರಜ್ಞೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಗೆ ದಾಖಲಾದ ಮಾರನೇ ದಿವಸ ಪೊಲೀಸರು ನಿಪಿ-1 ದೂರಿನೆ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಆದ ಸುಟ್ಟ ಗಾಯಗಳಿಗು ಹಾಗು ಆರೋಪಿತರಿಗು ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಟರ್ಪಂಟೈಲ್ ಉಗ್ಗಿ ಸುಟ್ಟ ಗಾಯ ಪಡಿಸಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**22)** ನನ್ನ ಗಂಡನಿಗೆ ನನ್ನನ್ನು ಕೊಲೆ ಮಾಡುವ ಯಾವುದೇ ಉದ್ದೇಶ ಇರಲ್ಲಿಲ್ಲ ಹಾಗು ಯಾವುದೇ ಟರ್ಪಂಟೈಲ್ ಉಗ್ಗಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಆಕಸ್ಮಿಕವಾಗಿ ಆದ ಸುಟ್ಟ ಗಾಯಗಳನ್ನು ದುರುಪಯೋಗ ಪಡಿಸಿಕೊಂಡು ಆರೋಪಿತರ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದೂರನ್ನು ಸಲಸ್ಲಿದರೆ ನನ್ನ ಗಂಡ ಹಾಗು ಅವರ ಸಂಬಂದಿಕರು ಹೆದರಿಕೊಂಡು ಅವರ ಆಸ್ತಿಗಳನ್ನು ನನ್ನ ಹೆಸರಿಗೆ ಮಾಡಿಕೊಡುತ್ತಾರೆ ಎಂದು ಸುಳ್ಳು ದೂರನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

23) ಈ ಪ್ರಕರಣದಲ್ಲಿ ಬೆಂಕಿ ಹಚ್ಚಲು ಉಪಯೋಗಿಸಿದರು ಎನ್ನಲಾದ ಬೆಂಕಿ ಪೊಟ್ಟಣ ಮತ್ತು ಬೆಂಕಿ ಕಡ್ಡಿಗಳನ್ನು ಮತ್ತು ಸುಟ್ಟ ಅರಿವೆಯ ತುಂಡುಗಳನ್ನು ನಾನು ಹಾಜರು ಪಡಿಸಿಲ್ಲ ಮತ್ತು ಪೊಲೀಸರು ಜಪ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. 2 ರಿಂದ 7 ನೇ ಆರೋಪಿತರು ನನ್ನ ಮಗನಿಗೆ ಕುಡಿಸುತ್ತೀ ಎಂದು ಬೈಯುತ್ತಿದ್ದರು ಎನ್ನುವ ವಿಷಯವನ್ನು ನನ್ನ ದೂರಿನಲ್ಲಿ ಹೇಳಿ ಬರೆಸಿಲ್ಲ ಎಂದರೆ ಸರಿ.

<u>ಪಾಟೀ ಸವಾಲು ಶ್ರೀ ಬಿ.ಟಿ.ಪಿ ವಕೀಲರಿಂದ 4 ಮತ್ತು 5 ನೇ ಆರೋಪಿತರ ಪರವಾಗಿ</u>

24) ದಿನಾಂಕ 07.08.2023 ರಂದು ಮುಂಜಾನೆ 07.30 ರಿಂದ 08 ಗಂಟೆಯವರೆಗೆ ನನ್ನ ಸುಟ್ಟ ಗಾಯಗಳು ಆಗಿದ್ದು ಮಧ್ಯಾಹ್ನ 02 ಗಂಟೆಗೆ ನಾನು ಆಸ್ಪತ್ರೆಗೆ ದಾಖಲಾಗಿರುತ್ತೇನೆ ಎಂದರೆ ಸರಿಯಲ್ಲ. 4 ಹಾಗು 5 ನೇ ಆರೋಪಿತರು ನನ್ನ ಗಂಡನ ಕಡೆಯಿಂದ ಸಂಬಂಧಿಕರು. ನನ್ನ ಗಂಡನ ತಂದೆ ಹೆಸರು ದ್ಯಾವಣ್ಣ ಎಂದರೆ ಸರಿ. ನನ್ನ ಮದುವೆ 1 ನೇ ಆರೋಪಿಯೊಂದಿಗೆ ಆದ ನಂತರ ನನಗೆ 4 ಹಾಗು 5 ನೇ ಆರೋಪಿತರೊಂದಿಗೆ ಮೊದಲನೇ ಬಾರಿ ಆಗಿರುತ್ತದೆ ಎಂದರೆ ಸರಿ. ನೆರೆ ಹೊರೆಯವರು ಎನ್ನುವುದನ್ನು ಬಿಟ್ಟರೆ 1 ಹಾಗು 2 ನೇ ಆರೋಪಿತರಿಗೆ ಹಾಗು 4 ಮತ್ತು 5 ನೇ ಆರೋಪಿತರಿಗೆ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

24) ಪದ್ಮಾವತಿ ಇವರ ಗಂಡ ಶ್ರೀರಾಮ ಎಂದರೆ ಸರಿ. ಅವರು ರೈಲ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆ ಕಿಡ್ನಿ ಸಮಸ್ಯೆಯಿಂದಾಗ ಆಸ್ಪತ್ರೆಗೆ ದಾಖಲಾದಾಗ ಅವರಿಗೆ ಹಣಕಾಸಿನ ಸಮಸ್ಯೆ ಇತ್ತು ಎಂದರೆ ಸರಿಯಲ್ಲ. ಈ ವಿಚಾರವಾಗಿ ನಾನು ಶ್ರೀರಾಮ ಇವರಿಗೆ ರೂ.50 ಸಾವಿರ ಹಣವನ್ನು ಕೊಡುವಂತೆ ಕೇಳಿದ್ದೆ ಎಂದರೆ ಸರಿಯಲ್ಲ. ಅವರು ನನ್ನ ಗಂಡ ತಿಳಿಸಿದರೆ ಮಾತ್ರ ಕೊಡುತ್ತೇನೆ ನೀನು ಕೇಳಿದರೆ ಕೊಡುವುದಿಲ್ಲ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ನಾವು ಈ ಪ್ರಕರಣದಲ್ಲಿ ಶ್ರೀರಾಮ ಇವರಿಗೆ 4 ಮತ್ತು 5 ನೇ ಆರೋಪಿತರನ್ನು ಸೇರಿಸಿ ನಿಮ್ಮಿಂದ ಹಣ ಹೇಗೆ ಕಿತ್ತುಕೊಳ್ಳಬೇಕು ಎಂದು ಗೊತ್ತಿದೆ ಎಂದು

ಹೇಳಿದ್ದೆ ಎಂದರೆ ಸರಿಯಲ್ಲ. ಪ್ರಶ್ನಿತ ಘಟನೆಗು ಹಾಗು 4 ಮತ್ತು 5 ನೇ ಆರೋಪಿತರಿಗು ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಶ್ರೀ ಬಿ.ಟಿ.ಪಿ ವಕೀಲರು ತಮ್ಮ ಉಳಿದ ಪಾಟೀ ಸವಾಲಿನ ಭಾಗವಾಗಿ ಶ್ರೀ ಬಿ.ವಿ.ಬಿ ವಕೀಲರು ಮಾಡಿದ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.

ಮರುವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .)

ಓ . ಹೇ. ಕೆ . ಸರಿ ಇದೆ .

C/C.2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ .